ಆ) ಕರ್ನಾಟಕ ನಾಗರೀಕ ಸೇವಾ (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಗಳು, 1983 ರ ನಿಯಮಗಳಂತೆ ನೇಮಕಾತಿ ಮಾಡಲಾಗುತ್ತಿದೆ.

ಇ) ಅಭ್ಯರ್ಥಿಗಳ ಅರ್ಹತಾ ಮತ್ತು ಆದ್ಯತೆ (Merit and preference) ಆಧಾರದ ಮೇಲೆ.

ಈ) ಯಾವುದೇ ನಿರ್ದಿಷ್ಟ ಪ್ರಕರಣಗಳನ್ನು ಉಲ್ಲೇಖಿಸದೇ ಇರುವುದರಿಂದ, ಈ ಪ್ರಶ್ನೆಗೆ ಉತ್ತರ ನೀಡಲು ಸಾಧ್ಯವಿಲ್ಲ.

ನಂದಿಕೂರಿನ ವಿದ್ಯುತ್ ಸ್ಥಾವರ.

674 (221) ಶ್ರೀ ಕುಂಬೈ ಸಂದರರಾವ್ (ಸುರತ್ಕಲ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಂದಿಕೂರಿನ ಉಷ್ಣ ವಿದ್ಯುತ್ ಸ್ಥಾವರದಲ್ಲಿ (ಕೊಜೆಂಟ್ರಿಕ್ಸ್) ಉತ್ಪತ್ತಿ ಮಾಡಲು ಉದ್ದೇಶಿಸಿರುವ ವಿದ್ಯುತ್ತಿನ ಪ್ರಮಾಣ ಎಷ್ಟು; ವಿಶೇಷತ : ಸೆದರಿ ಘಟಕದ ವಿದ್ಯುತ್ ಸರಬರಾಜನ್ನು ಯಾವ ಯಾವ ಪ್ರದೇಶಗಳಿಗೆ ಮಾಡುಲು ಉದ್ದೇಶಿಸಲಾಗಿದೆ;

ಆ) ಸದರಿ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು;

ಇ) ಈ ಸ್ಥಾವರ ಪ್ರದೇಶದ ನಿವಾಸಿಗಳಿಗೆ ಸೂಕ್ತ ಪರಿಹಾರ ಮತ್ತು ಬದಲಿ ಜಾಗದ ವ್ಯವಸ್ಥೆಯನ್ನು ಮಾಡಲಾಗಿದೆಯೇ;

ಈ) ಯೋಜನೆಯೆ ಆರಂಭದ ಮೊದಲು ಜಿಲ್ಲೆಯ ಧಾರಣ ಶಕ್ತಿಯ ಅಧ್ಯಯನ ನಡೆದು ಅನುಮೋದನೆ ಪಡೆಯುವ ವಿಚಾರದಲ್ಲಿ ಸರ್ಕಾರದವರು ಕೈ ಗೊಂಡಿರುವ ಕ್ರಮಗಳೇನು?

ಶ್ರೀ ಶರಣ ಬಸಪ್ಪದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) 1013.2 ಮೆಗಾವ್ಯಾಟ್ಸ್. ಈ ಉದ್ದೇಶಿತ ವಿದ್ಯುತ್ ಉತ್ಪಾದನಾ ಯೋಜನೆಯಿಂದ ಉತ್ಪಾದಿತವಾಗುವ ವಿದ್ಯುತ್, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಗ್ರಿಡ್‌ಗೆ ಸೇರ್ಪಡೆಯಾಗುತ್ತದೆ. ಹಾಗೂ ಮಂಗಳೂರು, ಉಡುಪಿ, ಹಾಸನ, ಮೈಸೂರು, ನೆಲಮಂಗಲ (ಬೆಂಗಳೂರು) ಈ ಪ್ರದೇಶಗಳಿಗೆ ವಿದ್ಯುತ್ ಪ್ರಸರಣಾಮಾರ್ಗಗಳ ಮೂಲಕ ಪ್ರಸರಣೆ ಮಾಡಲಾಗುವುದು.

ಆ) ಈ ಯೋಜನೆಯು ಇನ್ನೂ ಅಭಿವೃದ್ಧಿಯ ಹಂತದಲ್ಲಿದ್ದು, ಭಾರತ ಸರ್ಕಾರದಿಂದ ಮೇಲು ಖಾತರಿಯ (ಕೌಂಟರ್ ಗ್ಯಾರಂಟಿ) ನಿರೀಕ್ಷೆಯಲ್ಲಿದೆ. ಹೀಗಾಗಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿರುವುದಿಲ್ಲ.

ಇ) ಬೆಳಪು ಗ್ರಾಮದಲ್ಲಿ ಒಂದು ಸೂಕ್ತವಾದ ಪುನರ್‌ವ್ಯವಸ್ಥೆ ಮತ್ತು ಪುರ್ನವಸತಿ ಯೋಜನೆಯನ್ನು ಸದರಿ ವಿದ್ಯುತ್ ಉತ್ಪಾದನಾ ಯೋಜನೆಯಿಂದ ಸ್ಥಳಾಂತರಗೊಂಡು, ವಸತಿ ಹೀನರಾಗುವ ಜನರಿಗೆ ರಾಜ್ಯಸರ್ಕಾರದೊಡನೆ ಸಮಾಲೋಚಿಸಿ ಮತ್ತು ಕೆ.ವಿ. ಮಂಡಳಿಯ ಅನುಮೋದನೆಯೊಡನೆ ಹಾಗೂ ಗ್ರಾಮಾಭಿವೃದ್ಧಿ ಸಲಹಾ ಸಮಿತಿಯ ಶಿಫಾರಸ್ಸುಗಳ ಮೇರೆಗೆ ಮೆ: ಮಂಗಳೂರು ಪವರ್ ಕಂಪನಿಯು (ಕೊಜೆಂಟ್ರಿಕ್ಸ್) ಅನುಷ್ಠಾನಗೊಳಿಸುತ್ತದೆ.

ಈ) ಅಗತ್ಯವಿಲ್ಲ. ಈ ಯೋಜನೆಯ ವಿವರವಾದ ವರದಿಯನ್ನು, ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಶಾಸನ ಬದ್ಧ ಸಂಸ್ಥೆಗಳು ವಿವರವಾಗಿ ಪರಿಶೀಲಿಸಿ ಒಪ್ಪಿಗೆ ನೀಡಿದ ನಂತರವೇ ಯೋಜನೆ ಕಾರ್ಯ ಕೈಗೊಳ್ಳಲಾಗುತ್ತದೆ.

ಹೊಸಕೋಟೆ ತಾಲ್ಲೂಕಿನಲ್ಲಿ ನಡೆದಿರುವ ಕೊಲೆಗಳು.

675(1151) ಶ್ರೀ.ಸಿ.ಎಂ. ಲಿಂಗಪ್ಪ(ರಾಮನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1) 1996ರಿಂದ ಈವರೆಗೆ ಹೊಸಕೋಟೆ ತಾಲ್ಲೂಕಿನಲ್ಲಿ ಆದ ಕೊಲೆಗಳ ಸಂಖ್ಯೆ ಎಷ್ಟು? ಅವುಗಳಲ್ಲಿ ರಾಜಕೀಯ ಹಿನ್ನಲೆಯುಳ್ಳ ಕೊಲೆಗಳ ಸಂಖ್ಯೆ ಎಷ್ಟು?

2) ಇವುಗಳಲ್ಲಿ ಅಪರಾಧಿಗಳ ತನಿಖೆ ನಡೆಸಿ ಕಾನೂನಿನ ಕ್ರಮ ಕೈಗೊಳ್ಳಲಾದ ಪ್ರಕರಣಗಳ ಸಂಖ್ಯೆ ಎಷ್ಟು?

ಶ್ರೀ ಪಿ.ಆರ್.ಸಿಂಧ್ಯ (ಗೃಹ ಸಚಿವರು)

1) 1996ರಿಂದ ಈವರೆಗೆ ಹೊಸಕೋಟೆ ತಾಲ್ಲೂಕಿನಲ್ಲಿನಡೆದ ಕೊಲೆಗಳ ವಿವರ ಈ ಕೆಳಕಂಡಂತಿದೆ. 1996 12 (1-ತಪ್ಪು ತಿಳುವಳಿಕೆಯ ಪ್ರಕ ರಣ) 1997 11 1998 11(1-ತಪ್ಪು ತಿಳುವಳಿಕೆಯ ಪ್ರಕರಣ) 1999 3 (12-3-99ರವರೆಗೆ) ರಾಜಕೀಯ ಹಿನ್ನೆಲೆಯುಳ್ಳ ಯಾವುದೇ ಕೊಲೆ ಪ್ರಕರಣಗಳು ವರದಿಯಾಗಿರುವುದಿಲ್ಲ.

2) ಹೊಸಕೋಟೆ ತಾಲ್ಲೂಕಿನಲ್ಲಿ ನಡೆದೆ ಎಲ್ಲಾ ಕೊಲೆಗಳಲ್ಲಿ ತನಿಖೆ ನಡೆಸಿ ಕಾನೂನಿನ ಕ್ರಮ ಕೈಗೊಂಡಬಗ್ಗೆ ವಿವರ ಈ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ವರ್ಷ	ಒಟ್ಟು ಕೊಲೆ ಪ್ರಕರಣ ಗಳು	ನ್ಯಾಯಾಲಯಕ್ಕೆ ದೋಷಾರೋಪಣ ಸಲ್ಲಿಸಿದಪ್ರಕರಣ ಗಳಸಂಖ್ಯೆ	ನ್ಯಾಯಾಲಯಕ್ಕೆ ಸಿ.ಅಂತಿಮವರದಿ ಸಲ್ಲಿಸಿರುವ ಪ್ರಕರಣಗಳಸಂಖ್ಯೆ	ನ್ಯಾಯಾಲಯಕ್ಕೆ ಬಿ.ಅಂತಿಮವರದಿ ಸಲ್ಲಿಸಿರುವಪ್ರಕರ ಣಗಳಸಂಖ್ಯೆ	ತನಿಖೆಯ ಲ್ಲಿರುವ ಪ್ರಕರಣ ಸಂಖ್ಯೆ
1)	1996	12	9	2	1	-
2)	1997	11	6	4	-	1
3)	1998	11	4	1	1	5
					3) ಪ್ರಕರಣಗಳಲ್ಲಿ ಕ್ರಮಗೊಂಡಿದ್ದು ನ್ಯಾಯಾಲಯಕ್ಕೆ ಸಿ-ಅಂತಿಮ ವರದಿಯನ್ನು ಸಲ್ಲಿಸಲು ಮೇಲಧಿಕಾರಿರವರ ಅನುಮತಿಗಾಗಿ ಕಾಯ್ದಿರಿಸಲಾಗಿದೆ	
4)	1999	3	-	-	3	